Crimil Misc.178 /2024

PW-01

ದಿನಾಂಕ: 19-11-2025.

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲು ಶ್ರೀಮತಿ YRT ಮಾನ್ಯ ವಕೀಲರಿಂದ ಎದುರುದಾರರ ಪರವಾಗಿ**

ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ನಾನು ಎದುರುದಾರರ ತಂದೆಯ ಅಕ್ಕನ ಮಗಳಾಗಿರುತ್ತೇನೆ. ನಮ್ಮಿಬ್ಬರದು ಹಳೆಯ ಸಂಬಂಧದಲ್ಲಿ ಮದುವೆಯಾಗಿರುತ್ತದೆ ಎಂದರೆ ಸರಿ . ನನ್ನ ಹಾಗೂ ಅಣಬಿ ಗ್ರಾಮದಲ್ಲಿ 17 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ತಂದೆ ತಾಯಿಗಳು ನಮ್ಮಿಬ್ಬರ ಮದುವೆ ಸಂದರ್ಭದಲ್ಲಿ ಎದುರುದಾರರಿಗೆ 2.50 ತೊಲೆ ಬಂಗಾರ ಕೊಟ್ಟಿರುತ್ತಾರೆ . ಮದುವೆ ಆದ ನಂತರ ನಾನು ಎದುರುದಾರರ ಮನಗೆ ಹೋಗಿದ್ದು ಅಲ್ಲಿ ನಾನು , ಎದುರುದಾರರು ಹಾಗೂ ನನ್ನ ಅತ್ತೆ ಮಾತ್ರ ವಾಸ ಮಾಡುತ್ತಿದ್ದೇವು . ನನ್ನ ಅತ್ತೆಯವರಿಗೆ ವಯಸ್ಸಾಗಿರುತ್ತದೆ ಎಂದರೆ ಸರಿ . ನನ್ನ ಅತ್ತೆಗೆ ವಯಸ್ಸಾಗಿದ್ದರಿಂದ ಎದುರುದಾರರು ಮನಯ ಎಲ್ಲಾ ಜವಬ್ದಾರಿಗಳನ್ನು ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ .

ಯಾವ ದಿನಾಂಕದಂದು ಎದುರುದಾರರು ನನಗೆ ಹಲ್ಲೆ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ . ಎದುರುದಾರರು ನನ್ನ ಮೇಲೆ ಹಲ್ಲೆ ಮಾಡಿ ಕಿರುಕುಳ ಕೊಟ್ಟಿದ್ದಕ್ಕೆ ನಾನು ಭೀಗುಡಿ ಪೊಲಿಸ್ ಠಾಣೆಯಲ್ಲಿ ಅವರ ವಿರುದ್ಧ ದೂರನ್ನು ಕೊಟ್ಟಿರುತ್ತೇನೆ . ಎದುರುದಾರರು ನನಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ . ನನಗೆ 4-5 ಬಾರಿ ಗರ್ಭಪಾತವಾಗಿರುತ್ತದೆ . ತರ್ಕಸಪೇಟೆಯಲ್ಲಿ ನಾನು ಅಕ್ಕಪಕ್ಕದರೊಂದಿಗೆ ಕೂಲಿ ಕೆಸಕ್ಕೆ ಹೋಗುತ್ತಿದ್ದೆ ಎಂದರೆ ಸರಿ . ಅಕ್ಕಪಕ್ಕದ ಹೆಣ್ಣು ಮಕ್ಕಳು ನನಗೆ ಎದುರುದಾರರು ಸರಿಯಾಗಿರುವುದಿಲ್ಲ ಅವರ ಜೊತೆ ಸಂಸಾರ ಯಾವ ಕಾರಣಕ್ಕಾಗಿ ಮಾಡುತ್ತಿದ್ದೀಯ ಹಾಗೂ ನಿನಗೆ ಮಕ್ಕಳಾಗುವುದಿಲ್ಲವೆಂದು ಹೇಳುತ್ತಿದ್ದರು ಎಂದರೆ ಸರಿ . ನಾನು ತರ್ಕಸಪೇಟೆ ಯ ಶ್ರೀ ರೆಡ್ಡೆಪ್ಪ ತಂದೆ ಸಾಬಣ್ಣ ಬನ್ನಟ್ಟಿ ಇವರ ಜೊತೆಗೆ ಅನ್ಯೆತಿಕ ಸಂಬಂಧ ಹೊಂದಿದ್ದೆ ಎಂದರೆ ಸರಿಯಲ್ಲ. ನಾನು ಸದರಿ ರೆಡ್ಡೆಪ್ಪ ಇವರ ಜೊತೆಗೆ ಪೋನಿನಲ್ಲಿ ಮಾತಾನಾಡುತ್ತಿದ್ದಾಗ ಎದುರುದಾರರ ಹತ್ತಿರ ಸಿಕ್ಕಿಬಿದ್ದಿರುತ್ತೇನೆ ಎಂದರೆ ಸರಿಯಲ್ಲ . ಎದುರುದಾರರು ನನಗೆ ಹೇಳಿದ್ದರೂ ಕೂಡ ದಿ: 21-06-2023 ರಂದು ಮದ್ಯಾಹ್ನ ಸದರಿ ರೆಡ್ಡೆಪ್ಪ ಇವರ ಜೊತೆ ಇದ್ದಾಗ ಎದುರುದಾರರು ಕೈಗೆ ಸಿಕ್ಕಿ ಹಾಕಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ೆಲ ಸದರಿ ರೆಡ್ಡೆಪ್ಪ ಓಡಿ ಹೋಗಿರುತ್ತಾರೆ ಎಂದರೆ ಸರಿಯಲ್ಲ . ನಾನು ಹಾಗೂ ಸದರಿ ರೆಡ್ಡೆಪ್ಪ ಇವರು ಜೊತೆ ಇರುವುದನ್ನು

ಎದುರುದಾರರ ಅಕ್ಕನ ಮಗಳಾದ ಶ್ರೀಮತಿ ತನುಜ ಇವರು ನೋಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕಾಗಿ ಎದುರುದಾರರು ನನ್ನ ತಾಯಿ, ನನ್ನ ಅಣ್ಣ, ಹಾಗೂ ನನ್ನ ದೊಡ್ಡಮ್ಮ ಇವರನ್ನು ಕರೆಸಿ ನ್ಯಾಯಾ ಪಂಚಾಯತಿ ಮಾಡಿ ನನ್ನನ್ನು ಅವರು ಜೊತೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 21-06-2023 ಇಲ್ಲಿಯವರೆಗೆ ಎದುರುದಾರರು ಅವರು ತಾಯಿ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಲು ಬಂದಿಲ್ಲ ಎಂದರೆ ಸರಿ. ಎದುರುದಾರರು ನನಗೆ ವರದಕ್ಷಣೆ ತೆಗೆದುಕೊಂಡು ಬರಲು ದೈಹಿಕ ಹಾಗೂ ಮಾನಸಿಕ ಹಿಂಸೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಎದುರುದಾರರು ಸದರಿ ಪಂಚಾಯತಿಯಲ್ಲಿ ಸದರಿ ರೆಡ್ಡೆಪ್ಪ ಇವರ ಫೋನ್ ನಂ ನ್ನು ನನ್ನ ತಮ್ಮನಿಗೆ ತೋರಿಸಿದಾಗ ಸದರಿ ಫೋನನ್ನು ಬಿಸಾಡಿರುತ್ತಾರೆ ಎಂದರೆ ಸರಿಯಲ್ಲ .

ನನ್ನ ತಂದೆ ತಾಯಿಗಳು ಶ್ರೀಮಂತರು ಎಂದರೆ ಸರಿಯಲ್ಲ. ನಾನು ಅಣಬಿ ಗ್ರಾಮದಲ್ಲಿ ದಿನಕ್ಕೆ 300 ಗಳಂತೆ ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ , ಎದುರುದಾರರು ಹೊಲ ವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ . ಎದುರುದಾರರು ಒಂದೊಂದು ಸಲ ಕೂಲಿ ಕೆಲಸ ಮಾಡುತ್ತಾರೆ ಹಾಗೂ ಕೆಲವೊಂದು ಸಲ ಮಾಡುವುದಿಲ್ಲ ಎಂದರೆ ಸರಿಯಲ್ಲ . ನಾನು ಶ್ರೀ ಮಹಾದೇವಪ್ಪ ಸಾಲಿಮನಿ ಇವರ ಮಾತನ್ನು ಕೇಳಿಕೊಂಡು ಎದುರುದಾರರ ವಿರುದ್ದ ಭೀಗುಡಿ ಪೋಲಿಸಿ ಠಾಣೆಯಲ್ಲಿ ಸುಳ್ಳಾದ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತಾಯಿ ಹಾಗೂ ನನ್ನ ತಮ್ಮನ ಮಾತನ್ನು ಕೇಳಿಕೊಂಡು ಎದುರುದಾರರ 2 ನೇ ಮದುವೆ ಆಗಿಗುತ್ತಾರೆ ಎಂದು ಅವರ ವಿರುದ್ದ ಸುಳ್ಳಾದ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ಎದುರುದಾರರು ವಯಸ್ಸಾದ ತಾಯಿಯನ್ನು ಹೊಂದಿದ್ದರಿಂದ ಅವರನ್ನು ನೋಡಿಕೊಳ್ಳಲು ಈ ದಿನವು ಕೂಡ ಅವರ ಮನೆಗೆ ಕರೆದುಕೊಂಡು ಹೋಗಲು ತಾಯಾರಿರುತ್ತಾರೆ ಎಂದರೆ ಸರಿ . ಎದುರುದಾರರಿಗೆ ತೊಂದರೆ ಕೊಡಲು ಅವರ ವಿರುದ್ದ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ಎದುರದಾರರ ಅಕ್ಕ ಭಾವ ನನಗೆ ಯಾವತ್ತಿಗೂ ಬೈದಿರುವುದಿಲ್ಲ ಎಂದರೆ ಸರಿಯಲ್ಲ . ಎದುರುದಾರರು 2 ನೇ ಮದುವೆಯಾಗಿದ್ದರಿಂದ ನಾನು ಅವರ ಜೊತೆಗೆ ಹೋಗಲು ತಯಾರಿರುವುದಿಲ್ಲ . ಎದುರುದಾರರು ನನಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ಮಾಡಿರುವುದಿಲ್ಲ ಹಾಗೂ ತಮ್ಮ ಮನೆಯಿಂದ ನನಗೆ ಹೊರ ಹಾಕಿರುವುದಿಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.